

**‘ಮೆಟಾವರ್ಸ್’ ಭವಿಷ್ಯದ ಜಗತ್ತಿನ ಅತಿ ದೊಡ್ಡ ಸಂಗತಿಯಾಗಲಿದೆ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂಬುದಂತೂ ಸತ್ಯ. ಹಾಗಾದರೆ ನಾವದನ್ನು ಎದುರಿಸಲು ಸಿದ್ಧರಿದ್ದೇವೆಯೇ?**



ಅನಿವಾರ್ಯವಾಗುವ ಸಾಧ್ಯತೆಗಳೇ ಹೆಚ್ಚಿವೆ. ಉದಾಹರಣೆಗೆ, ಮೆಟಾವರ್ಸಿನಲ್ಲಿ ನೀವು ಮುಖ್ಯವಾದ ವ್ಯಕ್ತಿಯೊಬ್ಬರನ್ನು ಭೇಟಿಯಾಗಲು ಹೋಗುತ್ತಿದ್ದೀರಿ ಅಂದುಕೊಳ್ಳಿ. ಅದು ನಿಮ್ಮದೇ ಅವತಾರದಲ್ಲಾಗಿರಬಹುದು ಅಥವಾ ಮತ್ಯಾವುದೋ ಅವತಾರದಲ್ಲೂ ಇರಬಹುದು. ಧರಿಸಲು ನಿಮಗೊಂದು ಆಕರ್ಷಕ ದಿರಿಸಿರದಿದ್ದರೆ ಆದೀತೇ? ಜೊತೆಗೊಂದು ಒಳ್ಳೆಯ ಶೂಸ್, ಚಂದದ ಬ್ಯಾಗನ್ನು ಕೊಳ್ಳಬೇಕೆಂದು ನಿಮಗನಿಸಿದರೆ ತಪ್ಪಿಲ್ಲ. ಹಾಗೆಯೇ, ತನ್ನ ಉತ್ಪಾದನೆಯ ವಸ್ತುಗಳನ್ನು ಮೆಟಾವರ್ಸಿನಲ್ಲಿ ಮಾರಲು ದೊಡ್ಡದೊಂದು ಶೋರೂಮ್ ನಿರ್ಮಾಣದ ಕನಸು ಹೊತ್ತಿರುವ ಉದ್ಯಮಿಗೆ ಅಲ್ಲಿ ಜಾಗ ಖರೀದಿಸುವ ಅಗತ್ಯ ಇದ್ದೇ ಇದೆಯಲ್ಲವೇ? ಹೀಗೆ, ಚರ–ಸ್ಥಿರ ವಸ್ತುಗಳ ದೊಡ್ಡ ಮಾರುಕಟ್ಟೆಯೇ ಇದೆ ಮೆಟಾವರ್ಸಿನಲ್ಲಿ; ಥೇಟ್ ನಮ್ಮ ಭೂಮಿಯ ಮೇಲೆ ಇರುವಂತೆ. ಒಂದೇ ವ್ಯತ್ಯಾಸವೆಂದರೆ, ಅಲ್ಲಿಯ ವಸ್ತುಗಳಿಗೆ ಎಕ್ಸ್‌ಪೈರಿ ದಿನಾಂಕ ಎಂಬುದಿಲ್ಲ. ವಸ್ತುವೊಂದು ಬಹಳ ಕಾಲ ಬಾಳಿಕೆ ಬರುತ್ತದೆಂದಾದರೆ, ಹೆಚ್ಚಿನ ಹಣ ನೀಡಲು ನಾವೆಂದೂ ಬೇಸರಿಸುವವರಲ್ಲ. ಅಂಥದ್ದರಲ್ಲಿ ನಾಶವೇ ಆಗದಿರುವಂತ ‘ವರ್ಚುಅಲಿ ರಿಯಲ್’ ವಸ್ತುಗಳನ್ನು ಖರೀದಿಸಲು ನಾವು ಹಿಂಜರಿಯುತ್ತೇವೆಯೆ?

ಈ ಕೊಡು–ಕೊಳ್ಳುವ ಆರ್ಥಿಕ ವ್ಯವಸ್ಥೆಗೂ ಮಿಗಿಲಾದ ಇನ್ನೊಂದು ವ್ಯವಹಾರವೊಂದು ಮೆಟಾವರ್ಸಿನಲ್ಲಿದೆ. ಅದು ‘ಡಾಟಾ ಸಂಗ್ರಹ’ ಎನ್ನುವ ದೈತ್ಯ ವ್ಯಾಪಾರ. ಈಗ ವಿವಿಧ ರೂಪದಲ್ಲಿ ನಡೆಯುತ್ತಿರುವ ಡಾಟಾ ಸಂಗ್ರಹದ ಮುಂದಿನ ಹಂತದ ಪ್ರಕ್ರಿಯೆಗೆ ಈ ಮೆಟಾವರ್ಸ್ ವೇದಿಕೆಯಾಗಬಲ್ಲದು. ಉದಾಹರಣೆಗೆ, ನಿಮಗೆ ಯಾವ ರೀತಿಯ ಸಂಗೀತ ಇಷ್ಟ, ಯಾವ ಸಂಗೀತಗಾರ ಇಷ್ಟ ಎಂಬುದು ಇಂದು ಡಾಟಾ ಬ್ಯಾಂಕಿನಲ್ಲಿ ಲಭ್ಯವಿರುವ ಸಂಗತಿ. ನಾಳೆ ಮೆಟಾವರ್ಸ್ ಅಕೌಂಟ್ ತೆರೆದು ನೀವು, ಅಲ್ಲಿ ಅದೇ ಸಂಗೀತಗಾರನ ಲೈವ್ ಕಾರ್ಯಕ್ರಮಕ್ಕೂ ಹೋಗುತ್ತೀರಿ. ಆಗ ನೀವು, ಆತನ ಹಾಡಿನ ಸಾಹಿತ್ಯದ ಯಾವ ಸಾಲಿಗೆ ತಲೆದೂಗುತ್ತಿದ್ದೀರಿ, ಯಾವ ಮ್ಯೂಸಿಕ್ಕಿಗೆ ನಿಮ್ಮ ಕೈಬೆರಳುಗಳು ತಾಳ ತಟ್ಟುತ್ತಿವೆ ಎಂಬಂತಹ ನಿಖರ ಮಾಹಿತಿಗಳ ದತ್ತಾಂಶ ಕೂಡ ಲಭ್ಯವಾಗುತ್ತದೆ. ಮೆಟಾವರ್ಸಿನ ದತ್ತಾಂಶ ಖಜಾನೆ ತುಂಬಿ ತುಳುಕುತ್ತದೆ.

‘ಮುಂಬರುವ ದಿನಗಳಲ್ಲಿ, ಅತ್ಯಧಿಕ ಭೂಮಿ, ಹತ್ತಾರು ಫ್ಯಾಕ್ಟರಿ–ಗಣಿಗಳನ್ನು ಹೊಂದಿದವ ಸಾಹುಕಾರನೆನಿಸಿಕೊಳ್ಳುವುದಿಲ್ಲ, ಅತಿ ಹೆಚ್ಚು ಡಾಟಾ ಸಂಗ್ರಹ ಹೊಂದಿದವನೇ ಜಗತ್ತಿನ ಶ್ರೀಮಂತ ವ್ಯಕ್ತಿ ಅನ್ನಿಸಿಕೊಳ್ಳುತ್ತಾನೆ’ ಎಂಬುದು ಒಪ್ಪಿತ ಸಂಗತಿಯೇ ಆಗಿದೆ. ಹೀಗಿರುವಾಗ ಹೆಚ್ಚು ಜನ ಬಳಸುತ್ತಿರುವ ‘ಮೆಟಾವರ್ಸ್’ ಒಂದರ ಮಾಲೀಕನ ಸಂಪತ್ತು ಅಂಕೆಗೆ ಮೀರಿದ್ದೇ ಆಗಿರುತ್ತದೆ.

## ಸಾಲು ಸಾಲು ಪ್ರಶ್ನೆಗಳು

‘ಮೆಟಾವರ್ಸ್’ ಭವಿಷ್ಯದ ಜಗತ್ತಿನ ಅತಿ ದೊಡ್ಡ ಸಂಗತಿಯಾಗಲಿದೆ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂಬುದಂತೂ ಸತ್ಯ. ಹಾಗಾದರೆ ನಾವದನ್ನು ಎದುರಿಸಲು ಸಿದ್ಧರಿದ್ದೇವೆಯೇ? ಅದು ನಮ್ಮ ಜೀವನದ ಮೇಲೆ ಮಾಡುವ ಪರಿಣಾಮವಾದರೂ ಏನು? ದಿನದ ಅದೆಷ್ಟು ಸಮಯವನ್ನು ನಾವು ಮೆಟಾವರ್ಸಿನಲ್ಲಿ ಕಳೆಯುತ್ತೇವೆ? ಇಂದು ಸದಾಕಾಲ ಗೋಣು ಬಗ್ಗಿಸಿ ಕೈಲಿರುವ ಮೊಬೈಲು ನೋಡುವಂತೆ, ನಾಳೆ ನಾವೆಲ್ಲ ದಪ್ಪ ಕನ್ನಡಕ ಧರಿಸಿ ಶೂನ್ಯದಲ್ಲಿ ದೃಷ್ಟಿ ನೆಟ್ಟು ಕುಳಿತಿರುತ್ತೇವೆಯೇ? ನಮ್ಮದೇ ಹೀಗಾದರೆ ನಮ್ಮ ಮುಂದಿನ ಪೀಳಿಗೆಯ ಪಾಡೇನು? ಹೀಗೆ ಪ್ರಶ್ನೆಗಳ ಗುಚ್ಛವೇ ನಮ್ಮ ಮುಂದಿದೆ.

ಇವುಗಳಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಸುಲಭ. ನಾವಲ್ಲದ ನಮ್ಮನ್ನು ಕಾಣಿಸುವ, ನಮ್ಮಲ್ಲಿ ಹುಸಿ ಹಮ್ಮನ್ನೊಂದು ಹುಟ್ಟುಹಾಕುವ ಫೇಸ್‌ಬುಕ್ಕಿನಂತಹ ತಾಣಕ್ಕೆ ನಾವು ಅಂಟಿಕೊಂಡಿರುವ ಪರಿ ಗೊತ್ತೇ ಇದೆ. ಹಾಗಿರುವಾಗ, ನಮ್ಮ ಕನಸಿನ ಸುಂದರ ಲೋಕವನ್ನೇ ಕಟ್ಟಿಕೊಡಬಲ್ಲ ಮೆಟಾವರ್ಸಿನ ವ್ಯಸನ ನಮಗಂಟುವುದರಲ್ಲಿ ಸಂಶಯವೇ ಇಲ್ಲ. ನಮ್ಮ ದಿನನಿತ್ಯದ ಜಂಜಾಟಗಳಿಂದ ಬಿಡುಗಡೆಗೆ ಅದು ರಹದಾರಿಯಾಗಬಲ್ಲದು. ಬಸ್ ನಿಲ್ದಾಣದ